**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 5805/2023 ಸಿ.ಡಬ್ಲ್ಯೂ.1 ಪಿ.ಡಬ್ಲ್ಯೂ.1

| | |
|---|---|
| ಹೆಸರು | ಶಿವರಾಜಕುಮಾರ |
| ತಂದೆ/ಗಂಡ | ಮಲ್ಲಿಕಾರ್ಜುನ |
| ವಯಸ್ಸು | 42 ವರ್ಷ |
| ಉದ್ಯೋಗ | ರೇವಿನ್ಯೂ ಶಿರಸ್ತೇದಾರರು, ತಹಶೀಲ್ ಕಾರ್ಯಲಯ ಸೇಡಂ |
| ವಾಸಸ್ಥಳ | ಸೇಡಂ |

ದಿನಾಂಕ 21-05-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು 2022 ರಿಂದ ಸೇಪ್ಟಂಬರ 2025 ರವರೆಗೆ ಆಳಂದದಲ್ಲಿ ಆಹಾರ ಶಿರಸ್ತೇದಾರರು ಅಂತಾ ಕೆಲಸ ಮಾಡಿರುತ್ತೇನೆ.

ಚಾಸಾ 2 ರಿಂದ 11 ಪರಿಚಯ ಇರುತ್ತಾರೆ. ದಿಃ 21-06-2023 ರಂದು ಬೆ. 10.00 ಗಂಟೆಗೆ ಪೋಲಿಸ್ ಠಾಣೆಯಿಂದ ಒಂದು ಮನವಿ ಪತ್ರ ಬಂದಿತ್ತು. ಸದರಿ ಪತ್ರದಲ್ಲಿ ವಾಹನ ಸಂಖ್ಯೆ ಕೆ ಎ 27/ಎ-0060 ಇದರಲ್ಲಿ ಸರ್ಕಾರದಿಂದ ಸಾರ್ವಜನಿಕರಿಗೆ ವಿತರಿಸಲಾಗುವ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದಾರೆ ಅಂತಾ ತಿಳಿಸಿದ್ದು, ಅದನ್ನು ಪರಿಶೀಲನೆ ಮಾಡಬೇಕು ಅಂತಾ ಮನವಿ ಮಾಡಿದ ಮೇರೆಗೆ ನಾನು ಪೋಲಿಸ್ ಠಾಣೆಗೆ ಹೋಗಿ ಪರಿಶೀಲನೆ ಮಾಡಿದಾಗ ನೋಡಿದಾಗ ಸದರಿ ಅಕ್ಕಿಯು ವಿವಿದ ಯೋಜನೆಗಳಲ್ಲಿ ಸರ್ಕಾರದಿಂದ ಸಾರ್ವಜನಿಕರಿಗೆ ವಿತರಿಸಲಾಗುವ ಪಡಿತರ ಅಕ್ಕಿ ಅಂತಾ ಕಂಡು ಬಂದಿರುತ್ತದೆ. ಸದರಿ ವಿಷಯವಾಗಿ ದಾಖಲೆಗಳನ್ನು ಕೇಳಿದಾಗ ಯಾವುದೇ ದಾಖಲೆ ಇರುವುದಿಲ್ಲ. ಸದರಿ ಅಕ್ಕಿಯು ಸಾರ್ವಜನಿಕರಿಗೆ ವಿತರಿಸುವ ಅಕ್ಕಿ ಆದ ಕಾರಣ ನಮ್ಮ ಸಿಬ್ಬಂದಿಯಾದ ಚಾಸಾ 2 ಮತ್ತು 3 ರವರನ್ನು ಕರೆಯಿಸಿ ಅವರ ಸಮಕ್ಷಮ ಅದನ್ನು ಜಪ್ತಿ ಪಡಿಸಿಕೊಂಡು ಸದರಿ ಅಕ್ಕಿಯಿಂದ ತಲಾ ಒಂದೊಂದು ಒಟ್ಟು 2 ಕೆ.ಜಿ ಅಕ್ಕಿಯನ್ನು ಸ್ಯಾಂಪಲಗಾಗಿ ತೆಗೆದುಕೊಂಡು ಪಂಚನಾಮೆ ಮಾಡಿರುತ್ತೇನೆ. ಸದರಿ ಅಕ್ಕಿಯನ್ನು ವೇ-ಬ್ರೀಜ್ ನಲ್ಲಿ ತೂಕ ಮಾಡಿಸಿದಾಗ ಅಕ್ಕಿಯ ಸಮೇತ ವಾಹನ 17,800 ಕೆ.ಜಿ ಅಕ್ಕಿ ಇತ್ತು. ನಂತರ ಸದರಿ ಅಕ್ಕಿಯನ್ನು ಚಾಸಾ 4 ರವರ ಬಳಿ ಶೇಖರಣೆ ಮಾಡಿ ರಶೀದಿ ಪಡೆದುಕೊಂಡಿರುತ್ತೇನೆ. ನಂತರ ಖಾಲಿ ವಾಹನವನ್ನು ತೂಕ ಮಾಡಿಸಿದಾಗ 5340 ಕೆ.ಜಿ ತೂಕ ಇತ್ತು. ನಂತರ ವಾಹನ ಪೋಲಿಸ್ ಠಾಣೆಗೆ ಒಪ್ಪಿಸಿರುತ್ತೇನೆ. ನಂತರ ನಮ್ಮ ಗೊಡಾವನಲ್ಲಿ ಇದ್ದ ಅಕ್ಕಿಯಲ್ಲಿ ಒಂದೊಂದು ಕೆ.ಜಿ ಯಂತೆ ಒಟ್ಟು 2 ಕೆ.ಜಿ. ಸ್ಯಾಂಪಲಗಾಗಿ ತೆಗೆದುಕೊಂಡಿರುತ್ತೇವೆ. ಒಟ್ಟು ಜಪ್ತಿ ಪಡಿಸಿದ ಅಕ್ಕಿ 12460

ಕೆ.ಜಿ ಇದ್ದು ಅದರ ಅಂದಾಜು ಕಿಮ್ಮತ್ತು ರೂ. 3,11,500/- ಇತ್ತು. ಖಾಲಿ ವಾಹನ ಮೌಲ್ಯ ಅಂದಾಜು ರೂ. 1,90,000/- ಇತ್ತು.  ಪಂಚನಾಮೆಯನ್ನು ಲ್ಯಾಪಟಾಪನಲ್ಲಿ ಟೈಪ ಮಾಡಿ ಪಂಚರು ಸಹಿ ಪಡೆದು ಠಾಣೆಗೆ 3.00 ಗಂಟೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1 (ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ದೂರಿನ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2 ಎ ಅಂತಾ ಗುರುತಿಸಲಾಯಿತು. ಸಾಕ್ಷಿಯು ಸ್ಯಾಂಪಲಗಾಗಿ ತೆಗೆದ ಅಕ್ಕಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಅಂತಾ ಗುರುತಿಸಲಾಯಿತು. ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗಾಗಿ  ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ